ಕರ್ನಾಟಕ ಸರ್ಕಾರ
ಕೇಂದ್ರೀಕೃತ ದಾಖಲಾತಿ ಘಟಕ, ಆಯುಕ್ತರ ಕಚೇರಿ, ಶಾಲಾಶಿಕ್ಷಣ ಇಲಾಖೆ, ಕೆಂಪೇಗೌಡ ರಸ್ತೆ, ಬೆಂಗಳೂರು-560009
email :cackarnataka1@gmail.com ದೂರವಾಣಿ 080-22483145,22483140

ಸಂಖ್ಯೆ:ಸಿಎಸಿ-05/ಬಿ.ಇಡಿ.ದಾ-8/2024-25 ದಿನಾಂಕ:19-02-2025

# ಅಭ್ಯರ್ಥಿಗಳಿಗೆ ಸೂಚನೆಗಳು

ವಿಷಯ : **2024-25ನೇ ಸಾಲಿನ ಬಿಇಡಿ ಸೀಟುಗಳ ದಾಖಲಾತಿ ಪ್ರಕ್ರಿಯೆಗೆ ಮೂಲದಾಖಲಾತಿ ಪರಿಶೀಲನೆಯಾದ ಅಭ್ಯರ್ಥಿಗಳಿಗೆ (ಕೌನ್ಸಿಲಿಂಗ್) ಪ್ರಕ್ರಿಯೆ ದಿನಾಂಕವನ್ನು ವಿಸ್ತರಿಸಿರುವ ಬಗ್ಗೆ.**

ಉಲ್ಲೇಖ: ಸರ್ಕಾರದ ಪತ್ರ ಸಂಖ್ಯೆ: ಇಡಿ.23.ಯುಜಿಹೆಚ್2024(ಇ), ದಿ:19/02/2025

&&&&&&&

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ 2024-25ನೇ ಸಾಲಿನ ಸರ್ಕಾರಿ ಕೋಟಾದ ಬಿ.ಇಡಿ ಸೀಟುಗಳ ಹಂಚಿಕೆ ಪ್ರಕ್ರಿಯೆಯ 5ನೇ ಹಾಗೂ ಅಂತಿಮ ಸುತ್ತು ದಿನಾಂಕ:10/02/2025ರಂದು ಪೂರ್ಣಗೊಂಡಿರುತ್ತದೆ.

5ನೇ ಸುತ್ತಿನ ನಂತರ ಸೀಟು ಹಂಚಿಕೆ ಆಗದ ಕೆಲವು ಅಭ್ಯರ್ಥಿಗಳಿಗೆ ಈ ರೀತಿ ** ಗುರುತು ಬಂದಿರುವ ಮತ್ತು ಬಯಸಿದ ಕಾಲೇಜು ಸಿಗದ ಕಾರಣ ದಾಖಲಾತಿ ಪತ್ರ ಪಡೆಯದೆ ಇರುವ ಕೆಲವು ಅಭ್ಯರ್ಥಿಗಳು ಮತ್ತೊಮ್ಮೆ Option Entryಗೆ ಅವಕಾಶ ನೀಡುವಂತೆ ಕೋರಿರುತ್ತಾರೆ.

ಉಲ್ಲೇಖಿತ ಪತ್ರದ ಆದೇಶದಂತೆ ಸದರಿ ಅಭ್ಯರ್ಥಿಗಳಿಗೆ ಉಳಿಕೆಯಾಗಿರುವ ಸೀಟುಗಳ ಮಾಟ್ರಿಕ್ಸ್‌ನ್ನು 6ನೇ ಸುತ್ತಿಗೆ ದಿನಾಂಕ:20/02/2025ರಂದು ಪ್ರಕಟಿಸಲಾಗುತ್ತದೆ. 6ನೇ ಸುತ್ತಿಗೆ ಕಾಲೇಜುಗಳ ಆಯ್ಕೆಗಾಗಿ Option Entryಗೆ ದಿನಾಂಕ:20/02/2025 ರಿಂದ ದಿ:23/02/2025ರ ವರೆಗೆ ಅವಕಾಶ ನೀಡಲಾಗಿದೆ ಮೇಲೆ ತಿಳಿಸಿರುವಂತೆ ಎಲ್ಲಾ ಅರ್ಹ ಅಭ್ಯರ್ಥಿಗಳೂ, Login ಆಗಿ 6ನೇ ಸುತ್ತಿನ ಸೀಟು ಹಂಚಿಕೆ ಬಯಸುವುದಾಗಿ ನಮೂದಿಸುವುದು ಕಡ್ಡಾಯವಾಗಿರುತ್ತದೆ. ದಿನಾಂಕ:25/02/2025ರಂದು 6ನೇ ಸುತ್ತಿನ ಸೀಟು ಹಂಚಿಕೆ ಪ್ರಕಟಣೆ ಮಾಡಲಾಗುವುದು, ಸೀಟು ಹಂಚಿಕೆಯಾದ ಅಭ್ಯರ್ಥಿಗಳು Online ನಲ್ಲಿ ಚಲನ್ ಡೌನ್‌ಲೋಡ್ ಮಾಡಿಕೊಂಡು ನಿಗಧಿತ ದಾಖಲಾತಿ ಶುಲ್ಕವನ್ನು ದಿನಾಂಕ:01/03/2025ರೊಳಗೆ SBI ಬ್ಯಾಂಕಿನಲ್ಲಿ ಪಾವತಿಸಿ, ತಾವು ಆಯ್ಕೆ ಮಾಡಿಕೊಂಡಿರುವ ವ್ಯವಸ್ಥಾಪಕ ಕೇಂದ್ರಗಳಲ್ಲಿ (DIET/CTE) ಪ್ರವೇಶಾತಿ ಪತ್ರವನ್ನು (Admission Slip) ಪಡೆದು ಸಂಬಂಧಿಸಿದ ಕಾಲೇಜಿನಲ್ಲಿ ದಾಖಲಾತಿ ಪಡೆಯಲು ದಿನಾಂಕ:06/03/2025ರ ವರಗೆ ಕಾಲಾವಕಾಶ ನೀಡಿದೆ ಇದು ಬಿಇಡಿ ಪ್ರವೇಶಾತಿಗೆ ಕೊನೆಯ ಸುತ್ತಾಗಿರುತ್ತದೆ ಎಂಬುದನ್ನು ಅಭ್ಯರ್ಥಿಗಳ ಗಮನಕ್ಕೆ ತರಲಾಗಿದೆ.

**ವಿ.ಸೂ: ಸೀಟು ಹಂಚಿಕೆಗೆ ಸಂಬಂಧಿಸಿದಂತೆ ಅಭ್ಯರ್ಥಿಗಳಿಗೆ ವೈಯಕ್ತಿಕವಾಗಿ ಮಾಹಿತಿ ನೀಡಲಾಗುವುದಿಲ್ಲ.**

ಸಹಿ/-
ಜಂಟಿ ನಿರ್ದೇಶಕರು
ಕೇಂದ್ರೀಕೃತ ದಾಖಲಾತಿ ಘಟಕ